ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.)

ಅ) ಹೌದು.

ಆ) ರೂ. ೪೬,೯೨,೦೦೦—೦೦

ಇ) ಕಟ್ಟಡ ನಿರ್ಮಾಣಕ್ಕಾಗಿ, ಸಿಬ್ಬಂದಿ ವೇತನ ವೆಚ್ಚಕ್ಕಾಗಿ, ಕಲಾ ಚಟುವಟಿಕೆಗಳಿಗಾಗಿ, ಹಾಗೂ ಚಿತ್ರಕಲಾ ಮಹಾ ವಿದ್ಯಾಲಯಕ್ಕಾಗಿ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿರುವ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳು.

೧೧೧೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿರುವ ಒಟ್ಟು ನಗರ ಹಾಗೂ ಪಟ್ಟಣಗಳ ಸಂಖ್ಯೆಎಷ್ಟು;

(ಆ) ಇವುಗಳಲ್ಲಿ ಎಷ್ಟು ನಗರ ಹಾಗೂ ಪಟ್ಟಣಗಳಲ್ಲಿ ಕುಡಿಯುವ ನೀರಿನ ಯೋಜನೆಗಳು ಪೂರ್ತಿಯಾಗಿವೆ?

(ಇ) ಎಷ್ಟು ನಗರ ಹಾಗೂ ಪಟ್ಟಣಗಳಲ್ಲಿ ಇನ್ನೂ ಯೋಜನೆಗಳು ಪ್ರಾರಂಭವಾಗಿಲ್ಲ;

(ಈ) ಹಾಗಿದ್ದಲ್ಲಿ ಯಾವಾಗ ಪ್ರಾರಂಭವಾಗುವುದು;

(ಉ) ಈ ವರ್ಷ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಎಷ್ಟು ಹಣವನ್ನು ವಿಚುಮಾಡಲು ಸರ್ಕಾರ ಯೋಜಿಸಿದೆ;

ಶ್ರೀ ಟಿ. ಏನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು.)—

(ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ೧೭೨ ನಗರ ಪಟ್ಟಣಗಳು ಒಳಪಡುವುವು.

(ಆ) ಇವುಗಳಲ್ಲಿ ೧೭೦ ನಗರ ಪಟ್ಟಣಗಳಲ್ಲಿ ಕುಡಿಯುವ ನೀರಿನ ಯೋಜನೆಗಳು ಪೂರ್ತಿಯಾಗಿವೆ.

(ಇ) ಮಂಗಳೂರು ಜಿಲ್ಲೆಯ ಸಾಲಿಗ್ರಾಮ ಪಟ್ಟಣಕ್ಕೆ ಮಾತ್ರ ಯೋಜನೆ ಪ್ರಾರಂಭವಾಗಿಲ್ಲ.

(ಈ) ಸಾಲಿಗ್ರಾಮ ಪಟ್ಟಣಕ್ಕೆ ರೂ. ೪೫.೦೦ ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕಾರ್ಯವನ್ನು ಪ್ರಾರಂಭಿಸಲಾಗುವುದು.

(ಉ) ಪ್ರಸ್ತುತ ವರ್ಷ ೯೦–೯೧ರಲ್ಲಿ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಮಂಡಳಿಯು ರೂ. ೧೩೨೮.೦೦ ಲಕ್ಷ ವಿಚ್ರ್ಮಾಡಲು ಯೋಜಿಸಿದೆ.

ಭೂ ಸಂರಕ್ಷಣ ಯೋಜನೆಗಾಗಿ ವಿಶ್ವಬ್ಯಾಂಕಿನ ನೆರವು

೧೧೧೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

(ಅ) ಕಳೆದ ೧೦ ವರ್ಷದಲ್ಲಿ ರಾಜ್ಯದಲ್ಲಿ ಭೂ ಸಂರಕ್ಷಣಾ ಕಾರ್ಯಕ್ರಮಕ್ಕಾಗಿ ಸರ್ಕಾರವು ಎಷ್ಟು ಹಣ ವಿಚ್ರ್ಮಾಡಿದೆ (ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿ ಒದಗಿಸುವುದು)?

(ಆ) ಈ ಕಾರ್ಯಕ್ರಮಕ್ಕಾಗಿ ಪ್ರಸಕ್ತ ವರ್ಷ ಎಷ್ಟು ಹಣವನ್ನು ವಿಚ್ರ್ಮಾಡಲು ಸರ್ಕಾರ ಉದ್ದೇಶಿಸಿದೆ?

(ಇ) ಈ ಕಾರ್ಯಕ್ರಮಗಳಿಗಾಗಿ ವಿಶ್ವ ಬ್ಯಾಂಕಿನ ಸಹಾಯವನ್ನು ಕೋರಲಾಗಿದೆಯೇ?

(ಈ) ಹಾಗಿದ್ದಲ್ಲಿ, ವಿವರಗಳನ್ನು ಒದಗಿಸುವುದು?